ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER : ಪ್ರಜಾವಾಣಿ

ದಿನಾಂಕ : DATE : 14/04/2019

## ಗೃಹ ಸಚಿವ ಪಾಟೀಲ ಕುಮ್ಮಕ್ಕು: ಆರೋಪ

# ಶಾಸಕ ನಡಹಳ್ಳಿ ಮೇಲೆ ಹಲ್ಲೆ ಯತ್ನ

14-4-19

ಪ್ರಜಾವಾಣಿ ವಾರ್ತೆ

ವಿಜಯಪುರ:ಬಿಜೆಪಿ ಶಾಸಕ ಎ.ಎಸ್. ಪಾಟೀಲ ನಡಹಳ್ಳಿ ಶನಿವಾರ ಇಲ್ಲಿ ಪತ್ರಿಕಾಗೋಷ್ಠಿ ನಡೆಸುತ್ತಿದ್ದಾಗ, ಗೃಹ ಸಚಿವ ಎಂ.ಬಿ.ಪಾಟೀಲ ಪರ ಘೋಷಣೆ ಕೂಗುತ್ತಾ ಏಕಾಏಕಿ ಸಭಾಂಗಣದೊಳಕ್ಕೆ ನುಗ್ಗಿದ ಗುಂಪೊಂದು, ಶಾಸಕರ ಮೇಲೆ ಹಲ್ಲೆಗೆ-ಯತ್ನಿಸಿದ.

‘ಭಾರತ ದೇಶ, ಜೈ ಜೈ ಬಸವೇಶ’, ‘ಹುಚ್ಚ ಹುಚ್ಚ, ನಡಹಳ್ಳಿ ಹುಚ್ಚ’ ಎಂದು ಪ್ರತ್ಯೇಕ ಲಿಂಗಾಯತ ಧರ್ಮ ಪರ ಹಾಗೂ ನಡಹಳ್ಳಿ ವಿರುದ್ಧ ಘೋಷಣೆ ಕೂಗುತ್ತಾ ಮುನ್ನುಗ್ಗಿದ ಗುಂಪು, ಶಾಸಕರತ್ತ ನುಗ್ಗಿ ಹಲ್ಲೆಗೆ ಮುಂದಾಯಿತು. ಶಾಸಕರ ವಿರುದ್ಧ ಮನಬಂದಂತೆ ಹರಿಹಾಯ್ದ ಗುಂಪು, ದಾಂದಲೆ ನಡೆಸಿತು.

ವಿಷಯ ತಿಳಿದು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಬಂದ ವಿಜಯಪುರ ಡಿವೈಎಸ್‌ಪಿ ಡಿ.ಅಶೋಕ, ಗುಂಪನ್ನು ಹೊರ ಹಾಕಿ ಪತ್ರಿಕಾಗೋಷ್ಠಿಗೆ ಅನುವು ಮಾಡಿಕೊಟ್ಟರು.

ಗುಂಪಿನಲ್ಲಿ ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ಲಿಂಗಾಯತ ಪ್ರತ್ಯೇಕ ಧರ್ಮದ ಹೋರಾಟದ ಕಾರ್ಯಕರ್ತರಿದ್ದರು. ಬಹುತೇಕರು ಲಿಂಗಾಯತ ಧರ್ಮದ ಪರ ಬರಹವಿದ್ದ ಟೋಪಿ ಧರಿಸಿದ್ದರು.

‘ನೀರಾವರಿ ಯೋಜನೆಗಳು ವಿಫಲವಾಗಿವೆ’ ಎಂದು ಸಚಿವ ಎಂ.ಬಿ.ಪಾಟೀಲ ವಿರುದ್ಧ ನಡಹಳ್ಳಿ ಇತ್ತೀಚೆಗೆ ಆರೋಪ ಮಾಡಿದ್ದನ್ನು ಖಂಡಿಸಿ ಈ ದಾಳಿ ನಡೆದಿದೆ ಎನ್ನಲಾಗಿದೆ.

**‘ಗೂಂಡಾ ಸರ್ಕಾರ-ಗೂಂಡಾಗಿರಿ’:** ‘ಗೃಹ ಸಚಿವರೇ ತಮ್ಮ ಬೆಂಬಲಿಗರ ಮೂಲಕ ಗೂಂಡಾಗಿರಿ ನಡೆಸಿದ್ದಾರೆ. ನನ್ನ ಹಕ್ಕು ಕಸಿಯುವ ಯತ್ನ ಮಾಡಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇವರು ಪ್ರಶ್ನಾತೀತರಾ’ ಎಂದು ನಡಹಳ್ಳಿ, ಸಚಿವರ ವಿರುದ್ಧ ಕಿಡಿಕಾರಿದರು.

‘ಶಾಸಕರು ದೂರು ಕೊಟ್ಟಿದ್ದು, ಪರಿಶೀಲನೆ ನಡೆಸುತ್ತಿದ್ದೇವೆ. ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರಕಾಶ್ ಅಮೃತ್ ನಿಕ್ಕಂ ‘ಪ್ರಜಾವಾಣಿ’ಗೆ ತಿಳಿಸಿದರು.



ವಿಜಯಪುರದಲ್ಲಿ ಶನಿವಾರ ಮುದ್ದೇಬಿಹಾಳದ ಬಿಜೆಪಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ನಡೆದ ದಾಂದಲೆಯ ಚಿತ್ರಣ

> **ನಡಹಳ್ಳಿ ಹದ್ದು ಮೀರಿ ಮಾತನಾಡಿದ್ದಕ್ಕೆ ಜನ ಆಕ್ರೋಶಗೊಂಡಿದ್ದಾರೆ. ಪ್ರತಿಭಟಿಸಲು ಎಲ್ಲರಿಗೂ ಹಕ್ಕಿದೆ. ಆದರೆ ಪತ್ರಿಕಾಗೋಷ್ಠಿಗೆ ನುಗ್ಗಿದ್ದು ತಪ್ಪು.**
> **ಎಂ.ಬಿ.ಪಾಟೀಲ,** ಗೃಹ ಸಚಿವ

> **ಶರಣ ಸಂಸ್ಕಾರದವನು ನಾನು. ಹೊಡಿ, ಬಡಿ ಗೊತ್ತಿಲ್ಲ. ಇಂಥದ್ದಕ್ಕೆ ಹೆದರಲ್ಲ. ನೀರಾವರಿ ಹೋರಾಟ ಮುಂದುವರೆಯಲಿದೆ. ಮತ್ತಷ್ಟು ಗಟ್ಟಿಯಾಗಿರುವೆ**
> **ಎ.ಎಸ್.ಪಾಟೀಲ ನಡಹಳ್ಳಿ,** ಶಾಸಕ